International Journal of Kannada Research
www.kannadajournal.com

ISSN: 2454–5813
IJSR 2017; 3(1): 19-21
© 2017 IJKS
www.kannadajournal.com
Received: 04-11-2016
Accepted: 05-12-2016

**ಮೇಘರಾಜ ಎಂ ವಾಡಿ**
ಸಂಶೊಧನಾ ವಿದ್ಯಾರ್ಥಿ ಕನ್ನಡ ಅಧ್ಯಯನ ಸಂಸ್ಥೆ ಗುಲಬರ್ಗಾ ವಿಶ್ವವಿದ್ಯಾಲಯ ಕಲಬುರಗಿ.

**Correspondence**
**ಮೇಘರಾಜ ಎಂ ವಾಡಿ**
ಸಂಶೊಧನಾ ವಿದ್ಯಾರ್ಥಿ ಕನ್ನಡ ಅಧ್ಯಯನ ಸಂಸ್ಥೆ ಗುಲಬರ್ಗಾ ವಿಶ್ವವಿದ್ಯಾಲಯ ಕಲಬುರಗಿ.

# ಆಧುನಿಕ ವಚನಕಾರರಾಗಿ ದೊಡ್ಡಬಸಪ್ಪ ಬಳೂರಗಿ

**ಮೇಘರಾಜ ಎಂ ವಾಡಿ**

ವಚನ ಸಾಹಿತ್ಯವು ಕನ್ನಡ ಸಾಹಿತ್ಯದಲ್ಲಿ ತನ್ನದೇಯಾದ ಮೌಲ್ಯವನ್ನು ಹೊಂದಿದ್ದು ಪ್ರಪಂಚದ ಜ್ಞಾನ ಭಂಡಾರಕ್ಕೆ ಆಧ್ಯಾತ್ಮ ಭಂಡಾರಕ್ಕೆ ವಿಶಿಷ್ಠವಾದ ಕೊಡುಗೆಯನ್ನು ಕೊಟ್ಟಿದೆ. ಇದು ಸಾಮಾನ್ಯ ಜನತೆಯನ್ನು ದೃಷ್ಟಿಯಲ್ಲಿರಿಸಿಕೊಂಡು ಸೃಷ್ಟಿಯಾಗಿರುವದರಿಂದ ಜನಸಮ್ಮುಖವಾದ ಸಾಹಿತ್ಯವಾಗಿದೆ. ವಚನ ಎನ್ನುವ ಪದ ಸಾಹಿತ್ಯ ಪ್ರಪಂಚದಲ್ಲಿ ಕಾಲಮಾನಕ್ಕೆ ತಕ್ಕಂತೆ ಭಿನ್ನ ಭಿನ್ನ ನೆಲೆಗಳಲ್ಲಿ ಪ್ರಯೋಗಗೊಳ್ಳುತ್ತಾ ಬಂದಿದೆ. ಗದ್ಯ ಪದ್ಯದ ಹಿಡಿತಕ್ಕೆ ಸಿಗದೆ ಸ್ವತಂತ್ರ ಮುಕ್ತಕ ರಚನೆ ವಚನ ಸಂಸ್ಕೃತಿಯ ವಚೋನಮಾತಲ್ಲದ್ದು ವಚನವೆನಿಸಿತು. ವಚನವೆಂದರೆ ಮಾತಲ್ಲ. ಮಂತ್ರ ಆತ್ಮಶಕ್ತಿಯ ಮಾತು ಆಧ್ಯಾತ್ಮ ಸೂತ್ರ ಶಿವಶರಣರು ನುಡಿದಂತೆ ನಡೆದರು ನಡೆದು ನುಡಿದ ಮಾತು ಮಂತ್ರವಾದವು ಅದುವೇ ವಚನವೆನಿಸಿತು.

೧೨ನೇ ಶತಮಾನದ ವಚನಕಾರರ ಅನುಭವದ ಸ್ಥಾನದಲ್ಲಿ ೨೧ನೇ ಶತಮಾನದ ವಚನಕಾರರು ತಮ್ಮ ಅನುಭವಗಳನ್ನು ತುಂಬಿದ್ದಾರೆ. ಆ ಅನುಭವ ತುಂಬಿದ ವಚನಕಾರರಲ್ಲಿ ದೊಡ್ಡಬಸಪ್ಪ ಬಳೂರಗಿಯವರು ಪ್ರಮುಖರಾಗಿದ್ದಾರೆ. ಅವರು ದೊಡ್ಡಬಸಪ್ಪ ಎಂಬ ತಮ್ಮ ಹೆಸರಿಗೆ ತಕ್ಕಂತೆ ದೊಡ್ಡದನ್ನು ಹಾರೈಸಿ, ದೊಡ್ಡದನ್ನು ಅರಿಸಿ ದೊಡ್ಡವರ ದಾರಿಯಲ್ಲಿ ಮುನ್ನಡೆದಿದ್ದಾರೆ. ಆದುದ್ದರಿಂದ ದೊಡ್ಡ ಭಾವನೆಗಳು, ಅನಿಸಿಕೆಗಳು, ಬಯಕೆಗಳು ಅವರಿಗೆ ಆಯಾಸವಿಲ್ಲದೇ ದೊರೆಯುತ್ತಿವೆ. ಅವುಗಳಿಗೆ ಆಕಾರ ಕೊಡಲು ವಚನ ಪ್ರಕಾರವನ್ನು ಆಯ್ದುಕೊಂಡಿದ್ದು ಉಚಿತವಾದುದೇ ಆಗಿದೆ. ವೃತ್ತಿಯುಲ್ಲಿ ಉಪನ್ಯಾಸಕರಾಗಿ, ಪ್ರವೃತ್ತಿಯಲ್ಲಿ ಕವಿಗಳಾಗಿ, ಕಥೆಗಾರರಾಗಿ, ವಚನಕಾರರಾಗಿ ಶಹಾಪೂರಿನಲ್ಲಿ ವಿಶಿಷ್ಠವಾಗಿ ಗುರುತಿಸಿಕೊಂಡವರು. ಕೇವಲ ತಾತ್ವಿಕ ವಿಷಯಗಳಿಗಷ್ಟೇ ತಮ್ಮ ಅಧ್ಯಯನವನ್ನು ಸೀಮಿತಗೊಳಿಸಿಕೊಳ್ಳದೇ ಸಾಹಿತ್ಯ ಆಸಕ್ತಿಯನ್ನು ರೂಢಿಸಿಕೊಂಡವರು ಅವರ ವಚನಗಳಲ್ಲಿ ಸಮಕಾಲೀನ ಸಮಾಜದ ಆಗುಹೋಗುಗಳ ಬಗೆಗೆ ಸ್ಪಂದನವಿದೆ, ಪ್ರತಿಕ್ರಿಯೆ ಇದೆ. ಸಾಮಾಜಿಕ ವಿಚಾರಗಳನ್ನು ಅಭಿವ್ಯಕ್ತಿಸುವಲ್ಲಿ ಧಾರ್ಮಿಕ ವಿಚಾರಗಳನ್ನು ಅರ್ಥೈಸುವಲ್ಲಿ ಅವರ ವಚನಗಳು ವಿಶಿಷ್ಠವಾಗಿವೆ. ದೊಡ್ಡಬಸಪ್ಪ ಬಳೂರಗಿಯವರು ಶ್ರೀಶರಣಬಸಪ್ಪ ಎಂಬ ಅಂಕಿತನಾಮದಲ್ಲಿ ಅನೇಕ ವಚನಗಳನ್ನು ಬರೆದಿದ್ದಾರೆ. ೧೯೮೭ರಲ್ಲಿ ರಚಿಸಿದ "ವಚನ ವಸಂತ" ಎಂಬ ಕೃತಿ ಬಹುಮುಖ್ಯ ವಚನ ಕೃತಿಯಾಗಿದೆ.

ದೊಡ್ಡಬಸಪ್ಪ ಬಳೂರಗಿ ಧಾರ್ಮಿಕ, ರಾಜಕೀಯ, ಸಾಮಾಜಿಕ ಕಳಕಳಿ, ಆಧ್ಯಾತ್ಮಿಕ ಮತ್ತು ವೈಜ್ಞಾನಿಕವಾದ ಜಗತ್ತಿನಲ್ಲಿ ನಡೆಯುತ್ತಿರುವ ಬೂಟಾಟಿಕೆಯನ್ನು ಖಂಡಿಸಿ ಸುಳ್ಳು ಆಶ್ವಾಸನೆ ಕೊಡುತ್ತಿರುವ ರಾಜಕಾರಣಿಗಳ ಟೀಕೆ, ರೈತರನ್ನು ಶೋಷಣೆಗೆ ಒಳಪಡಿಸುತ್ತಿರುವ ಬಂಡವಾಳಶಾಹಿಗಳ ಸ್ವಾರ್ಥ ಮುಂತಾದವುಗಳ ವಿರುದ್ಧ ಸಿಡಿದೇಳುವ ಕಿಚ್ಚು ಅವರ ವಚನಗಳಲ್ಲಿ ನೋಡಬಹುದಾಗಿದೆ.

> "ಕಲ್ಪನೆಯ ಸ್ಪುರಣೆ ನಿನ್ನೊಳ ಮೂಡಿದೊಡೆ
> ಚೇತರಿಸಿ ಜನಿಸಿತೀ ಎಂಬತ್ನಾಲ್ಕು ಲಕ್ಷ
> ಜೀವರಾಸಿ!"

ಎಂಬಲ್ಲಿ ಸೃಷ್ಠಿಯ ಜನನದ ಕಲ್ಪನೆ ಸುಂದರವಾಗಿದೆ. ಸಮಾಜದಲ್ಲಿ ನಡೆಯುವಂಥ ಮೋಸ, ವಂಚನೆ ಮಾಡುವಂಥ ಜನರ ವಿರುದ್ಧವಾಗಿ ತಮ್ಮ ವಚನಗಳಲ್ಲಿ ಬಂಡಾಯದ ಧ್ವನಿ ಎತ್ತಿದ್ದಾರೆ. ಸಾಮಾಜಿಕ ತಾರತಮ್ಯವನ್ನು ವಿರೋಧಿಸಿದ್ದಾರೆ.

"ಮುಟ್ಟು ತಾ ಹೊಲೆಯಲ್ಲ
ಹುಟ್ಟು ತಾ ಮುನ್ನವೇ ಹೊಲೆಯಲ್ಲ
ಮುಟ್ಟು ತಾ ಮಾಡುವ
ಕೆಟ್ಟ ಕೆಲಸ ತಾ ಹೊಲೆಯಯ್ಯ
ದೇವ ಶ್ರೀಶರಣಬಸವೇಶ್ವರ"

೧೨ನೇ ಶತಮಾನದಲ್ಲಿ ಬಸವಣ್ಣನವರು ಜಾತಿಯತೆಯನ್ನು ಸಂಪೂರ್ಣವಾಗಿ ಖಂಡಿಸಿದರೂ ಕೂಡ ಪ್ರಸ್ತುತ ನಾವು ಆಧುನಿಕ ಯುಗದಲ್ಲಿ ಕಾಲಿಟ್ಟರೂ ಜಾತಿಯೆಂಬ ಹೆಮ್ಮರವು ತನ್ನ ಅನೇಕ ಕವಲುಗಳನ್ನು ಒಡೆದು ಹಿಂಬಾಲಿಸುತ್ತಲೇ ಇದೆ. ಯಾವ ಮನುಷ್ಯನೇ ಆಗಲಿ ನಾವು ಇದೇ ಜಾತಿಯಲ್ಲಿ ಇದೇ ಪಂಗಡದಲ್ಲಿ ಹುಟ್ಟಬೇಕೆಂದು ಕೇಳಿಕೊಂಡು ಬರುವುದಿಲ್ಲ. ಜಾತಿ ಹುಟ್ಟಿಕೊಂಡಿರುವುದೇ ವೃತ್ತಿಗನುಸಾರವಾಗಿ ಯಾವ ಜಾತಿ ಮೇಲಲ್ಲ ಯಾವ ಜಾತಿ ಕೀಳಲ್ಲ ಮನುಷ್ಯನಾಗಿ ಹುಟ್ಟಿದ ಮೇಲೆ ಒಂದೇ ಒಂದು ಜಾತಿ ಅದುವೇ ಮಾನವ ಜಾತಿ. ನಾವು ಮಾಡುವ ಯಾವುದೇ ಕೆಲಸವಾಗಲಿ ಶ್ರದ್ಧೆ ನಿಷ್ಠೆಯಿಂದ ಮಾಡಿದಾಗ ಮಾತ್ರ ಅದಕ್ಕೆ ಚ್ಯುತಿ ಬರುವುದಿಲ್ಲ. ತಾನು ಮಾಡುವ ಕೆಟ್ಟ ಕೆಲಸಗಳಾದ ಕೊಲೆ, ಸುಲಿಗೆ, ಅನ್ಯಾಯ, ಅತ್ಯಾಚಾರ ಇಂತಹ ಕೆಲಸಗಳಿಂದ ದೂರವಿದ್ದಾಗ ಮಾತ್ರ ಎಲ್ಲರೂ ನಮ್ಮೊಂದಿಗೆ ಸಹಬಾಳ್ವೆಯಿಂದ ಇರುತ್ತಾರೆ ಅಂದಾಗ ಮಾತ್ರ ನಾವು ಮಾಡುವಂತಹ ಕೆಲಸಗಳು ಒಳ್ಳೆಯದಾಗಿದ್ದರೆ ಸಮಾಜವು ನಮಗೆ ಒಪ್ಪಿಕೊಳ್ಳುತ್ತದೆ. ನಾವು ಪೂಜಿಸುವ ದೇವರಿಗೂ ಕೂಡ ಇಷ್ಟವಾಗುತ್ತದೆ.
ಬಡವ ಶ್ರೀಮಂತರು ಸಮಾಜದಲ್ಲಿ ಯಾವ ರೀತಿಯಾಗಿ ಬದುಕಬೇಕೆಂಬುದಕ್ಕೆ ಸಿರಿತನ ಬಂದೊಡೆ ಹಿಗ್ಗಿಲ್ಲವೆನಗೆ, ಬಡತನ ಬಂದರೆ ಕುಗ್ಗಿಲ್ಲವೆನಗೆ ಎಂದು ನಿರ್ಲಿಪ್ತತೆ ದೃಢ ನಿರ್ಧಾರ ತೋರ್ಪಡಿಸಿದ್ದಾರೆ.

"ದು:ಖ ಸುಖವಾಗಬೇಕಲ್ಲದೆ
ಸುಖ ದು:ಖವಾದರೆಂತಯ್ಯ
ಬಡತನ ನೀಗಿ ಸಿರಿತನ ಬರಬೇಕಲ್ಲದೆ
ಸಿರಿತನ ಹೋಗಿ ಬಡತನ ಬಂದರೆಂತಯ್ಯ"

ಎಂಬಲ್ಲಿ ನಿರ್ಧಾರ ಸಡಿಲಿದೆ ದು:ಖಕ್ಕೆ ಬಡತನಕ್ಕೆ ಹೆದರುವ ಅಭಿಪ್ರಾಯವಿದೆ. ಅಲ್ಲಲ್ಲಿ ವಿಚಾರಗಳ ತಾಕಲಾಟವಾಗಿದೆ. ಒಂದು ಮತ್ತೊಂದನ್ನು ಎದುರಿಸಿವೆ.

"ನಂಬದಿರು ನಂಬಿ ಕೆಡದಿರು
ಮುಂಬರಿದು ನುಡಿವ ವನಿತೆಯನು
ಅಂಬರದಷ್ಟು ಸುಳ್ಳು ಆಶ್ವಾಸನೆಗಳ ನೀಡುವ ನಾಯಕರು
ನಂಬುವಡೆ ಮನುಜ ನೀ ನಂಬು ನಿಮ್ಮ ಶಶಿಧರ ಪ್ರಿಯ
ದೇವ ಶ್ರೀಶರಣಬಸವೇಶ್ವರ"

ನಂಬಿಕೆ ಒಂದು ಅಮೂಲ್ಯವಾದ ತತ್ವ ಯಾವುದೇ ಒಬ್ಬ ವ್ಯಕ್ತಿಯನ್ನು ನಂಬಬೇಕಾದರೆ ಬಹಳ ಜಾಗೃತವಾಗಿ ಗಮನಿಸಬೇಕು. ನಗುವ ಹೆಂಗಸನ್ನು, ಆಕಾಶದಷ್ಟು ಸುಳ್ಳು ಆಶ್ವಾಸನೆ ಕೊಡುವ ರಾಜಕಾರಣಿಗಳನ್ನು ನಂಬುವುದಕ್ಕಿಂತಲೂ ಮುಂಚಿತವಾಗಿ ಮಾನವ ನೀನು ನಿನ್ನ ಅಂತರಂಗವನ್ನು ಮುಟ್ಟಿ ನೋಡಿಕೊ ಎಂದು ಎಚ್ಚರಿಕೆ ನೀಡಿರುವದನ್ನು ಗಮನಿಸಬಹುದಾಗಿದೆ.
ಜನರು ತಮ್ಮ ಸ್ವಾರ್ಥ ಬದುಕಿಗಾಗಿ, ಲಾಭಕ್ಕಾಗಿ ಏನೆಲ್ಲ ಹುಡುಕಲು ಪ್ರಯತ್ನ ಪಡುತ್ತಾರೆ. ಎಂಬುದನ್ನು ದೊಡ್ಡಬಸಪ್ಪ ಬಳೂರಗಿಯವರ ಈ ಕೆಳಗಿನ ವಚನದಲ್ಲಿ ಕಾಣಬಹುದಾಗಿದೆ.

"ಅರಸುತಿಹ ಬಡವ ಹೊಟ್ಟೆಗಾಗಿ
ಅರಸುತಿಹ ಹರದ ಲಾಭಕ್ಕಾಗಿ
ಅರಸುತಿಹರೆಮ್ಮ ನಾಯಕರು ಅಧಿಕಾರಕ್ಕಾಗಿ
ನಿನಗಾಗಿ ಅರಸುವವರನ್ನಾರನ್ನು ಕಾಣೆನಯ್ಯ
ದೇವ ಶ್ರೀಶರಣಬಸವೇಶ್ವರ"

ಬಡವ ತನ್ನ ಗೇಣು ಹೊಟ್ಟೆಗಾಗಿ ಪಡಬಾರದ ಪಾಡು ಪಡುವನು ವ್ಯಾಪಾರಿಯು ತನ್ನ ವ್ಯಾಪಾರದ ಲಾಭಕ್ಕಾಗಿ ದೇಶ ವಿದೇಶಕ್ಕಾದರೂ ಹೋಗುವನು ನಮ್ಮ ರಾಜಕಾರಣಿಗಳು ಅಧಿಕಾರ ಪಡೆಯಲು ಹೆಣ್ಣು, ಹೊನ್ನು, ಮಣ್ಣು ಖರ್ಚು ಮಾಡಿಯಾದರೂ ಅಧಿಕಾರ ಪಡೆಯುವರು. ಜನರ ಹಿತಕ್ಕಾಗಿ ಹಂಬಲಿಸುವ, ದುಡಿಯುವವನು ಭೂಮಿ ಮೇಲೆ ಹುಡುಕಿದರೂ ಒಬ್ಬರೂ ಸಿಗುವುದಿಲ್ಲ. ಎಂಬ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ.

"ಚಿನ್ನವಾದೊಡೇನು?
ರಾಜಾಂಕಿತವಿಲ್ಲದೆ ನಾಣ್ಯವಾಗದಯ್ಯ
ಬ್ರಹ್ಮ ಜ್ಞಾನಿಯಾದೊಡೇನು?
ಗುರೂಪದೇಶವಿಲ್ಲದೆ ದೈವತ್ವ ದೊರೆಯದಯ್ಯ
ದೇವ ಶ್ರೀಶರಣಬಸವೇಶ್ವರ"

ಇಲಿ ಕಾವ್ಯದ ಪ್ರತಿಭೆ ಇದೆ. ಭಕ್ತಿ ಮುಕ್ತಿಗಳ ವಿಷಯ ಬಂದಾಗ ಹೊಯ್ದಾಟ ಎದ್ದು ಕಾಣುತ್ತದೆ.

ಹಠವಿರಬೇಕು ಮನುಜಂಗೆ ಜ್ಞಾನವೇ ಬಾಯೆಂಬ
ಹಠವಿರಬೇಕು ಮನುಜಂಗೆ ಅಜ್ಞಾನವೇ ತೊಲಗೆಂಬ
ಶ್ರಮಿಸಬೇಕು ಮಾನವ ನಿರ್ಮಲತೆಯೇ ಬಾ ಎಂದು
ಶ್ರಮಿಸಬೇಕು ಮಾನವ ಮಲತ್ರಯವೇ ತೊಲಗೆಂದು
ದೇವ ಶ್ರೀಶರಣಬಸವೇಶ್ವರ"

ಸಮಾಜದಲ್ಲಿ ನಡೆಯುತ್ತಿರುವ ಅನ್ಯಾಯ, ಅತ್ಯಾಚಾರ ಇಂತಹವುಗಳೆಲ್ಲ ನಾವು ಖಂಡಿಸಬೇಕಾದರೆ, ಅದು ನಮ್ಮಲ್ಲಿರುವ ಜ್ಞಾನದಿಂದ ಮಾತ್ರ ಸಾಧ್ಯ. ಯಾವ ಮನುಷ್ಯನಲ್ಲಿ ಅಹಂಭಾವವಿರುತ್ತದೆಯೋ ಅವನು ಎಂದೆಂದಿಗೂ ಮುಂದೆ ಬರಲು ಸಾಧ್ಯವಿಲ್ಲ. ಅವನಲ್ಲಿರುವ ಅಂಧ:ಕಾರ, ಅಜ್ಞಾನ ತೊಲಗಿಸಿದಾಗ ಮಾತ್ರ ಅವನಲ್ಲಿ ಜ್ಞಾನದ ಕುರುಹು ಹುಟ್ಟಲು ಸಾಧ್ಯ. ನೀರು ಎಷ್ಟು ಪವಿತ್ರತೆಯಿಂದ ಕೂಡಿರುತ್ತದೆಯೋ ಮಾನವನ ಮನಸ್ಸು ಕೂಡ ಆ ರೀತಿಯ ಪವಿತ್ರತೆಯ ಭಾವನೆ ತಾಳಿದಾಗ ಮಾತ್ರ ಸಮಾಜದಲ್ಲಿ ನಾನು ನನ್ನದೆಂಬ ದುರಾಲೋಚನೆಯ ಭಾವನೆ ದೂರವಾಗಿ ಎಲ್ಲರಲ್ಲಿ ಪ್ರೀತಿ ಐಕ್ಯತೆಯ ಭಾವನೆ ಮೊಳಗಲು ಸಾಧ್ಯವಾಗುತ್ತದೆ. ನಮ್ಮ ದೇಹದಲ್ಲಿರುವಂತಹ ಮಲ ಮೂತ್ರವನ್ನು ಸಕಾಲದಲ್ಲಿ ಹೇಗೆ ಹೊರಹಾಕುತ್ತೇವೆಯೋ ಹಾಗೆ ನಮ್ಮಲ್ಲಿರುವ ಕೆಟ್ಟ ಗುಣಗಳನ್ನು ಅಂಧ:ಶ್ರದ್ಧೆಯನ್ನು ತೊಲಗಿಸಿದಾಗ ಮಾತ್ರ ಸಮಾಜದಲ್ಲಿ ಉತ್ತಮ ಪ್ರಜೆಯಾಗಿ ಬಾಳಲು ಸಾಧ್ಯ. ಎಂಬುದು ಈ ವಚನಕಾರರ ಸಾಲುಗಳಿಂದ ತಿಳಿಯಬಹುದಾಗಿದೆ.
ದೊಡ್ಡಬಸಪ್ಪ ಬಳೂರಗಿಯವರ ವಚನಗಳಲ್ಲಿ ಸರ್ವಸ್ವ, ಭಕ್ತಿಯೇ ಪರಮಾತ್ಮನನ್ನು ಒಲಿಸುವ ಶಕ್ತಿ, ಭಕ್ತಿ ಸುಖಕ್ಕಿಂತ ಇತರ ಸುಖಗಳೆಲ್ಲ ಗೌಣವೆಂಬ ಅಭಿಪ್ರಾಯವನ್ನು ಈ ಕೆಳಗಿನ ವಚನದ ಮೂಲಕ ಕಂಡುಕೊಳ್ಳಬಹುದಾಗಿದೆ.

"ನಾ ನಿನ್ನನ್ನು ಹೊಂದಲು ಭಕ್ತಿಯೇ ಆಧಾರವಯ್ಯ
ದೇವ ನಿನ್ನನ್ನು ಹೊಂದಲು ಭಕ್ತಿಯೇ ಮೂಲವಯ್ಯ
ಶಶಿಮೌಳಿಯನ್ನರಿಯಲು ಅನನ್ಯ ಭಕ್ತಿಯೇ ಆಧಾರವಯ್ಯ
ದೋಣಿ ಸಾಗಲು ನೀರು ಆಧಾರವಾದಂತೆ
ಜೀವನ ನೌಕೆ ಸಾಗಲು ಭಕ್ತಿಯೇ ಆಧಾರವಯ್ಯ
ಭಕ್ತಿಯ ನಿತ್ತೊಡೆ ಮುಕ್ತಿಯ ಬಯಸೇ"

ನಡೆಯೇ ನುಡಿಯಾಗಿ ರೂಪುಗೊಂಡಿತ್ತು ಹನ್ನೆರಡನೆಯ ಶತಮಾನದ ವಚನ ಧರ್ಮದಲ್ಲಿ. ಈಗ ಕಾಲ ಬದಲಾಗಿದೆ. ನಡೆ ಮಂದವಾಗಿ ನುಡಿಯೇ ತೀವ್ರವಾಗಿರುವ ಕಾಲವಿದು ಇಂಥಲ್ಲೊ ಮಂದನಡೆಗೆ ಸಮರ್ಥ ಮಾರ್ಗದರ್ಶನ ಮಾಡಬಲ್ಲ ನುಡಿಯ ಅವಶ್ಯಕತೆಯಿದೆ. ದೊಡ್ಡಬಸಪ್ಪ ಬಳೂರಗಿಯವರ ವಚನಗಳು ಇಂಥ ಮಾರ್ಗದರ್ಶನ ನೀಡುವಂತಿವೆ. ಇದರ ಜೊತೆಗೆ ಆಧುನಿಕ ಸಾಮಾಜಿಕ ಪ್ರಜ್ಞೆ, ವೈಚಾರಿಕ ನಿಲುವು, ಪ್ರಗತಿಯ ಕಳಕಳಿಯನ್ನು ಕ್ರಿಯಾತ್ಮಕವಾಗಿ ಮೂಡಿಸುವಲ್ಲಿ ಅವರ ವಚನಗಳು ಹೆಚ್ಚು ಸಹಾಯಕವಾಗಿವೆ.

ಹೀಗೆ ಒಂದೊಂದು ವಚನಗಳು ಮನ ಮುಟ್ಟುವಂತೆ, ಹೃದಯ ತಟ್ಟುವಂತಿವೆ. ಕಿರಿದರಲ್ಲಿ ಹಿರಿದಾದುದ್ದನ್ನು ಹೇಳುವ ಕುಶಲತೆ ದೊಡ್ಡಬಸಪ್ಪ ಬಳೂರಗಿಯವರಲ್ಲಿದೆ. ನಿರಾಡಂಬರವಾದ, ಸರಳ, ಸುಂದರ ಶೈಲಿ, ಎಲ್ಲ ನೇರ, ಸುಲಭ, ಅರ್ಥಗರ್ಭಿತ ಇಂತಹ ಹಲವು ವಚನಗಳನ್ನು ಎತ್ತಿ ತೋರಿಸಬಹುದು. ಓದುಗರ ಮನದ ಕತ್ತಲೆ ಕಳೆದು, ಹೊಸ ಬೆಳಕು ಚೆಲ್ಲುವ ಅಮೂಲ್ಯ ವಿಚಾರದ ಮುತ್ತುರತ್ನಗಳು ಇಲ್ಲಿ ತುಂಬಿಕೊಂಡಿವೆ. ಆಧುನಿಕ ವಚನ ಸಾಹಿತ್ಯದಲ್ಲಿ ದೊಡ್ಡಬಸಪ್ಪ ಬಳೂರಗಿಯವರು ಅಮರವಾಗಿ ಉಳಿಯುವ ಅಮೂಲ್ಯವಾದ ಕೃತಿರತ್ನೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

**ಆಧಾರ ಗ್ರಂಥಗಳು**

೧. ವಚನ ವಸಂತ : ಲೇ – ದೊಡ್ಡಬಸಪ್ಪ ಬಳೂರಗಿ
೨. ಆಧುನಿಕ ವಚನ ಸಾಹಿತ್ಯ : ಲೇ – ಡಾ. ನೀಲಮ್ಮ ಕತ್ನಳ್ಳಿ
೩. ಬೆಳೆಯುವ ಸಿರಿ(ಭಾಗ ೪) : ಸಂ – ಡಾ.ಬಸವರಾಜ ಸಬರದ